ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

No: DD/SSU/Novel Corona Virus/17/2019-20 (Part-1) Date: 29.07.2020

**ಸುತ್ತೋಲೆ**

**ವಿಷಯ: ಖಾಸಗಿ ಆಸ್ಪತ್ರೆಗಳು ಹಾಗೂ ಖಾಸಗಿ ಪ್ರಯೋಗಶಾಲೆಗಳಿಂದ ಕೋವಿಡ್-19 ತ್ವರಿತ ಪ್ರತಿಜನಕ ಪರೀಕ್ಷೆಗಳನ್ನು ಮಾಡುವ ಬಗ್ಗೆ.**

***

ಕೋವಿಡ್-19ರ ಪರೀಕ್ಷೆಯನ್ನು ಹೆಚ್ಚಿಸಲು, SARS-CoV-2 ಅನ್ನು ಮೊದಲೇ ಪತ್ತೆಹಚ್ಚಲು ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ-ಭಾರತ ಸರ್ಕಾರ ಪರೀಕ್ಷೆಗಳಾಗಿ ಪಾಯಿಂಟ್-ಆಫ್-ಕೇರ್ (PoC) ತ್ವರಿತ ಪ್ರತಿಜನಕ ಪರೀಕ್ಷೆ ಕಿಟ್‌ಗಳ ಬಳಕೆಯನ್ನು ಮೌಲ್ಯೀಕರಿಸಿದೆ ಮತ್ತು ಶಿಫಾರಸ್ಸು ಮಾಡಿದೆ. ಈ ಕಿಟ್ಟುಗಳು ಖಾಸಗಿ ಆಸ್ಪತ್ರೆ ಹಾಗೂ ಖಾಸಗಿ ಪ್ರಯೋಗಶಾಲೆಗಳ ಬಳಕೆಗಾಗಿ ಮಾರುಕಟ್ಟೆಯಲ್ಲಿ ಲಭ್ಯವಿವೆ. ಕೋವಿಡ್-19 ಪ್ರಕರಣಗಳನ್ನು ಮೊದಲೇ ಪತ್ತೆಹಚ್ಚುವ ದೃಷ್ಟಿಯಿಂದ ಮತ್ತು ಸಂಪರ್ಕ ದಲ್ಲಿರುವವರ ಪತ್ತೆಹಚ್ಚುವಿಕೆ ಮತ್ತು ನಿಯಂತ್ರಣ ಕ್ರಮಗಳನ್ನು ಅನುಸರಿಸುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸರ್ಕಾರಿ ಮತ್ತು ಖಾಸಗಿಯಾಗಿ ಹೆಚ್ಚಾಗಿ ಕೋವಿಡ್-19 ಪರೀಕ್ಷೆ ಮಾಡುವುದನ್ನು ಪ್ರೋತ್ಸಾಹಿಸುತ್ತದೆ.

ಹಾಗಿದ್ದರೂ, ಕೆಲವು ಖಾಸಗಿ ಆಸ್ಪತ್ರೆ ಹಾಗೂ ಖಾಸಗಿ ಪ್ರಯೋಗಶಾಲೆಗಳು ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ -ಭಾರತ ಸರ್ಕಾರವು ಶಿಫಾರಸ್ಸು ಮಾಡಿರುವ ಕಟ್ಟಳೆಗಳನ್ನು ಅನುಸರಿಸದೇ ಇರುವುದು ಈ ಕೆಳಗೆ ಸಹಿಮಾಡಿರುವವರ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಿದೆ. ಯಾವುದೇ ಖಾಸಗಿ ಆಸ್ಪತ್ರೆ ಮತ್ತು ಖಾಸಗಿ ಪ್ರಯೋಗಶಾಲೆಗಳು ತ್ವರಿತ ಪ್ರತಿಜನಕ ಪರೀಕ್ಷೆ ಮಾಡುವಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದು ಕಂಡುಬಂದರೆ, ಇದನ್ನು ತೀವ್ರವಾಗಿ ಪರಿಗಣಿಸಲಾಗುವುದು ಮತ್ತು ಸದರಿ ಸಂಸ್ಥೆಗಳ ಮೇಲೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ 2005, ಸಾಂಕ್ರಾಮಿಕ ರೋಗಗಳ ಕಾಯ್ದೆ 1897 ಮತ್ತು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ಕೆಪಿಎಂಇ) ಕಾಯ್ದೆಯಡಿ ಕಠಿಣ ಕ್ರಮ ವಹಿಸಲಾಗುವುದು.

1. ತ್ವರಿತ ಪ್ರತಿಜನಕ ಪರೀಕ್ಷೆಗಳನ್ನು ನಡೆಸುವ ಎಲ್ಲಾ ಖಾಸಗಿ ಆಸ್ಪತ್ರೆಗಳು, ಆಸ್ಪತ್ರೆಗಳು ಮತ್ತು ಆರೋಗ್ಯ ರಕ್ಷಣೆಗಾಗಿ ರಾಷ್ಟ್ರೀಯ ಮಾನ್ಯತೆ ಮಂಡಳಿ (NABH) ಯಿಂದ ಮಾನ್ಯತೆ ಪಡೆದಿರಬೇಕು ಮತ್ತು ಕೆಪಿಎಂಇ ಅಡಿಯಲ್ಲಿ ನೋಂದಾಯಿಸಿರಬೇಕು.
2. ತ್ವರಿತ ಪ್ರತಿಜನಕ ಪರೀಕ್ಷೆಗಳನ್ನು ನಡೆಸುವ ಎಲ್ಲಾ ಪ್ರಯೋಗಾಲಯ, ಪ್ರಯೋಗಾಲಯಗಳ ರಾಷ್ಟ್ರೀಯ ಮಾನ್ಯತೆ ಮಂಡಳಿ (NABL) ಯಿಂದ ಮಾನ್ಯತೆ ಪಡೆದಿರಬೇಕು ಮತ್ತು ಕೆಪಿಎಂಇ ಅಡಿಯಲ್ಲಿ ನೋಂದಾಯಿಸಿರಬೇಕು.

3. ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ -ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ತ್ವರಿತ ಪ್ರತಿಜನಕ ಪರೀಕ್ಷೆಯ ಕಿಟ್ಟುಗಳನ್ನು ಮಾತ್ರ ಪರೀಕ್ಷೆಗಾಗಿ ಬಳಸತಕ್ಕದ್ದು.
4. ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ -ಭಾರತ ಸರ್ಕಾರದಿಂದ ಕೋವಿಡ್-19 ಪ್ರಯೋಗ ಶಾಲೆಗಳೆಂದು ಮಾನ್ಯತೆ ಪಡೆದ ಎಲ್ಲಾ ಖಾಸಗೀ ಪ್ರಯೋಗಶಾಲೆಗಳೂ ತ್ವರಿತ ಪ್ರತಿಜನಕ ಪರೀಕ್ಷೆಗಳನ್ನು ಮಾಡಬಹುದು.
5. ಎಲ್ಲಾ ಖಾಸಗಿ ಆಸ್ಪತ್ರೆ ಮತ್ತು ಖಾಸಗಿ ಪ್ರಯೋಗಶಾಲೆಗಳು ನಡೆಸಿದ ಎಲ್ಲ ಪರೀಕ್ಷೆಗಳ ವಿವರಗಳನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ ಪೋರ್ಟಲ್‌ನಲ್ಲಿ ನೈಜ ಸಮಯದಲ್ಲಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ. ಆಸ್ಪತ್ರೆಗಳು / ಪ್ರಯೋಗಾಲಯಗಳಲ್ಲಿ ತ್ವರಿತ ಪ್ರತಿಜನಕ ಪರೀಕ್ಷೆಯನ್ನು ಪ್ರಾರಂಭಿಸುವ ಮೊದಲು ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ ಪೋರ್ಟಲ್‌ನ user credentials ನ್ನು ರಾಜ್ಯದಿಂದ ಪಡೆಯಲು knlabcovid19@gmail.com ಗೆ ಮಿಂಚಂಚೆ ಕಳುಹಿಸುವುದು.
6. ಕಾಲಕಾಲಕ್ಕೆ ನೀಡುವ ಕೋವಿಡ್-19 ಪರೀಕ್ಷೆಯ ಶಿಷ್ಟಾಚಾರಕ್ಕೆ ಬದ್ಧರಾಗಿರತಕ್ಕದ್ದು.
7. ಎಲ್ಲ ಖಾಸಗಿ ಆಸ್ಪತ್ರೆಗಳು/ಪ್ರಯೋಗಶಾಲೆಗಳು ಸಂಶಯಾಸ್ಪದ ಲಕ್ಷಣಗಳಿರುವ ಎಲ್ಲಾ ರೋಗಿಗಳನ್ನು, ತ್ವರಿತ ಪ್ರತಿಜನಕ ಪರೀಕ್ಷೆಗಳಲ್ಲಿ ಖಚಿತ ಪಡದಿರುವವರನ್ನು ನೈಜ ಸಮಯದ ಆರ್ ಟಿ-ಪಿಸಿಆರ್ ಪರೀಕ್ಷೆಗೆ ಕಳಿಸುವುದನ್ನು ಖಚಿತ ಪಡಿಸಿಕೊಳ್ಳಬೇಕು. ತ್ವರಿತ ಪ್ರತಿಜನಕ ಪಿಓಸಿ ಪರೀಕ್ಷೆಯು ಸಾಧಾರಣ ಸೂಕ್ಷ್ಮತೆಯನ್ನು ಹೊಂದಿರುವುದರಿಂದ ಇದು ವಿಶೇಷವಾಗಿ ಅಗತ್ಯವಾಗಿದೆ.
8. ಕರ್ನಾಟಕ ಸರ್ಕಾರದ ಆದೇಶ ಸಂ HFW 264 ACS 2020 ದಿನಾಂಕ 24.07.2020ರಂತೆ ಖಾಸಗಿ ಆಸ್ಪತ್ರೆಗಳು ಮತ್ತು ಪ್ರಯೋಗಶಾಲೆಗಳು ನಡೆಸುವ ಪ್ರತಿಯೊಂದು ಮಾದರಿಗಳ ತ್ವರಿತ ಪ್ರತಿಜನಕ ಪರೀಕ್ಷೆಗಳ ದರವು ವೈಯಕ್ತಿಕ ರಕ್ಷಣಾ ಸಲಕರಣೆಗಳು ಸೇರಿದಂತೆ ರೂ.700/-

31.7.20

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಶಸ್ತ್ರ ಚಿಕಿತ್ಸಕರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾ ಆಕುಕ ಅಧಿಕಾರಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ ಇಲಾಖೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ.
4. ನಿರ್ದೇಶಕರು, ಆಕುಕ ಸೇವೆಗಳು.